**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 20544/2017 ಚಾಸಾಃ 11 ಪ್ರಾಸಾಃ 7**

| | | |
|---|---|---|
| ಸಾಕ್ಷಿದಾರರ ಹೆಸರು | : | ಪುರುಷೋತ್ತಮ |
| ತಂದೆಯ ಹೆಸರು | : | ಶ್ರೀರಂಗಚಾರ್ |
| ವಯಸ್ಸು | : | 50 ವರ್ಷ |
| ವೃತ್ತಿ | : | ಪರಿಚಾಲಕರು |
| ವಾಸ | : | ಕಗ್ಗಲಿಪುರ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 01.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ನನಗೆ ಆರೋಪಿಗಳ ಪರಿಚಯ ಇರುತ್ತದೆ. ನಾನು ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಾಲಯದಲ್ಲಿರುವ ನವಗ್ರಹ ದೇವಸ್ಥಾನಗಳ ಪರಿಚಾಲಕ ಕೆಲಸವನ್ನು ನಾನು ಮಾಡುತ್ತಿದ್ದೆನು. 1ನೇ ಮತ್ತು 2ನೇ ಆರೋಪಿತರು ಸದರಿ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. 2015ರಲ್ಲಿ ಒಂದು ದಿನ 2ನೇ ಆರೋಪಿ ನಮ್ಮನ್ನು ಕರೆದು ದೇವಿಯ ಕಿರೀಟ ಮತ್ತು ಪಾದುಕೆಯಲ್ಲಿ ಭಿನ್ನವಾಗಿದ್ದು ಈ ವಿಚಾರವನ್ನು ಚಾಸಾ-1 ರವರಿಗೆ ತಿಳಿಸಿ ಬರುವುದಾಗಿ ಹೋಗಿರುತ್ತಾರೆ. ಸದರಿ ದೇವಸ್ಥಾನದ ಕಿರೀಟ ಮತ್ತು ಪಾದುಕೆ ಭಿನ್ನವಾಗಿರುವುದು ನಮಗೆ ತಿಳಿಯಿತು. ಉಳಿದ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

**ಸೂಚನೆಃ ಈ ಹಂತದಲ್ಲಿ ಪ್ರಾಜ್ಞಾ ಹಿ.ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿಯನ್ನು ಕೋರಿರುತ್ತಾರೆ. ಅದರಂತೆ ಅನುಮತಿಯನ್ನು ನೀಡಲಾಯಿತು.**

**<u>ಪಾಟೀ ಸವಾಲುಃ ಪ್ರಾಜ್ಞಾ ಹಿ.ಸ.ಸ.ಅ. ರವರಿಂದಃ</u>**

ನಾನು ಪೊಲೀಸರ ಮುಂದೆ ದಿಃ10.06.2015 ರಂದು ನಾನು ಬೆಳಿಗ್ಗೆ 8.30 ಗಂಟೆಯಿಂದ--------------------ತನಿಖೆಗೆ ಸಹಕರಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-28 ಎಂದು ಗುರ್ತಿಸಲಾಯಿತು. ಆರೋಪಿಗಳು ಸದರಿ ಕಿರೀಟ ಮತ್ತು ಪಾದುಕೆಯಲ್ಲಿ ಭಿನ್ನ ಉಂಟುಮಾಡಿರುವುದು ಮತ್ತು ಇತರ ರೀತಿಯಲ್ಲಿ ಅಕ್ರಮ ಎಸಗಿರುವುದು ನನಗೆ ಗೊತ್ತಿದ್ದರು ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಇಲ್ಲವೆಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**